ಕರ್ನಾಟಕ ಸರ್ಕಾರ

# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು

ಸಂಖ್ಯೆ: ಎಲ್‌ಆರ್‌ಟಿ/ 131 /2019-20 ದಿನಾಂಕ: 30-01-2020.

## ಸುತ್ತೋಲೆ

ವಿಷಯ : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಆರೋಗ್ಯ ಮೇಲ್ವಿಚಾರಕರು, (Health Supervisor) ಗಳಿಗೆ ಹಿರಿಯ ಆರೋಗ್ಯ ಮೇಲ್ವಿಚಾರಕರು, (Sr. Health Supervisor) ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ.

ಉಲ್ಲೇಖ : ನಿರ್ದೇಶನಾಲಯದ ಅ.ಜ್ಞಾ ಪತ್ರ ಸಂಖ್ಯೆ: ಹಿಆಸ/42/2019-20 ದಿನಾಂಕ: 24.12.2019 ಅಂತಿಮ ಜೇಷ್ಠತಾ ಪಟ್ಟಿಯಂತೆ.

******

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆರೋಗ್ಯ ಮೇಲ್ವಿಚಾರಕರು, (Health Supervisor) ವೃಂದದ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಜ್ಯೇಷ್ಠತಾ ಸಂಖ್ಯೆ: 01 ರಿಂದ 03 ರ ವರೆಗೆ (ಹೈದ್ರಾಬಾದ್-ಕರ್ನಾಟಕ) ಮತ್ತು ಜ್ಯೇಷ್ಠತಾ ಸಂಖ್ಯೆ: 01 ರಿಂದ 19 ರ ವರೆಗೆ (ಹೈ-ಕ ಹೊರತುಪಡಿಸಿ) ಉಲ್ಲೇಖಿತ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದೆ. ಈ ಜ್ಯೇಷ್ಠತಾ ಪಟ್ಟಿಯ ಆಧಾರದ ಮೇಲೆ ಆರೋಗ್ಯ ಮೇಲ್ವಿಚಾರಕರು, (Health Supervisor) ಹುದ್ದೆಯಿಂದ ಹಿರಿಯ ಆರೋಗ್ಯ ಮೇಲ್ವಿಚಾರಕರು, (Sr. Health Supervisor) ಹುದ್ದೆಗೆ ಪದೋನ್ನತಿ ನೀಡಲು ಕ್ರಮಕೈಗೊಳ್ಳುವ ಸಂಬಂಧ ಜ್ಯೇಷ್ಠತಾ ಸಂಖ್ಯೆ: 01 ರಿಂದ 03 ರ ವರೆಗೆ (ಹೈದ್ರಾಬಾದ್-ಕರ್ನಾಟಕ) ಮತ್ತು ಜ್ಯೇಷ್ಠತಾ ಸಂಖ್ಯೆ: 01 ರಿಂದ 19 ರ ವರೆಗೆ (ಹೈ-ಕ ಹೊರತುಪಡಿಸಿ) ವರೆಗೆ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಆರೋಗ್ಯ ಮೇಲ್ವಿಚಾರಕರು, ಈ ಕೆಳಕಂಡ ದಾಖಲಾತಿಗಳನ್ನು ದಿನಾಂಕ: 10-02-2020 ರೊಳಗೆ ನಿರ್ದೇಶನಾಲಯಕ್ಕೆ ಸಂಬಂಧಪಟ್ಟ ಮೇಲಾಧಿಕಾರಿಗಳ ಶಿಫಾರಸ್ಸಿನೊಂದಿಗೆ ಸಲ್ಲಿಸಲು ಸೂಚಿಸಿದೆ. ನಿಗಧಿತ ದಿನಾಂಕದ ನಂತರ ಸ್ವೀಕೃತವಾಗುವ ಅರ್ಜಿಗಳನ್ನು ಪದೋನ್ನತಿಗೆ ಪರಿಗಣಿಸಲಾಗುವುದಿಲ್ಲ.

1. ನೇಮಕಾತಿ ಆದೇಶ ಪ್ರತಿ.
2. ಆರೋಗ್ಯ ಮೇಲ್ವಿಚಾರಕರ ಹುದ್ದೆಗೆ ಪದೋನ್ನತಿ ಹೊಂದಿದ ಆದೇಶ ಪ್ರತಿ.
3. ಖಾಯಂಪೂರ್ವ ಸೇವಾವಧಿ ಘೋಷಣೆ ಪತ್ರ.
4. ಕನ್ನಡ ಭಾಷಾ ವಿನಾಯಿತಿ ಪ್ರಮಾಣ ಪತ್ರ ನಮೂನೆ 5(5).
5. ಎಸ್.ಎಸ್.ಎಲ್.ಸಿ. ಅಂಕಪಟ್ಟಿ
6. ಆರೋಗ್ಯ ಪರಿವೀಕ್ಷಕರ ಪ್ರಮಾಣ ಪತ್ರ
7. ಕಂಪ್ಯೂಟರ್ ಲಿಟ್ರಸಿ ಪ್ರಮಾಣ ಪತ್ರ
8. ಇಲಾಖಾ ಪರೀಕ್ಷೆಗಳಾದ ಅಕೌಂಟ್ಸ್ ಹೈಯರ್ ಮತ್ತು ಜನರಲ್ ಭಾಗ-1.
9. ಎರಡು ವರ್ಷ ಆಡಳಿತ ಕಾರ್ಯವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಿರುವ ಬಗ್ಗೆ ದೃಢೀಕರಣ ಪತ್ರ
10. ಮೂರು (3) ವರ್ಷಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳು 2016-17 ರಿಂದ 2018-19 ನೇ ಸಾಲಿನವರೆಗೆ
11. ಇಲಾಖಾ ವಿಚಾರಣೆ / ನ್ಯಾಯಾಲಯ ಪ್ರಕರಣಗಳು/ಅನಧಿಕೃತ ಗೈರು ಹಾಜರಿ/ ಬಾಕಿ ಇಲ್ಲದ ಬಗ್ಗೆ ದೃಢೀಕೃತ ಪ್ರತಿ.
12. ಪ.ಜಾತಿ / ಪ.ಪಂಗಡದ ನೌಕರರು ಸಂಬಂಧಪಟ್ಟ ಅಧಿಕಾರಿಗಳಿಂದ ದೃಢೀಕೃತ ಜಾತಿ ಪ್ರಮಾಣ ಪತ್ರ ನೀಡುವುದು.

**ವಿಶೂ:** ನಿಗದಿತ ದಿನಾಂಕದೊಳಗೆ ಮೇಲಿನ ಎಲ್ಲಾ ದಾಖಲಾತಿಗಳನ್ನು ಸಲ್ಲಿಸುವುದು, ಸಲ್ಲಿಸದೇ ಇದ್ದ ಪಕ್ಷದಲ್ಲಿ, ಪದೋನ್ನತಿಯನ್ನು ತಿರಸ್ಕರಿಸಿರುವುದಾಗಿ ಪರಿಗಣಿಸಲಾಗುವುದು.

ನಿರ್ದೇಶಕರು,
ಆರೋಗ್ಯ ಮತ್ತು ಕು.ಕ.ಸೇವೆಗಳು,
ಬೆಂಗಳೂರು.

**ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ:**

1. ಮಾನ್ಯ ಆಯುಕ್ತರ ಆಪ್ತ ಶಾಖೆ, ಆರೋಗ್ಯ ಮತ್ತು ಕು.ಕ.ಸೇ.ನಿರ್ದೇಶನಾಲಯ, ಬೆಂಗಳೂರು
2. ನಿರ್ದೇಶಕರ ಆಪ್ತ ಶಾಖೆ, ಆರೋಗ್ಯ ಮತ್ತು ಕು.ಕ.ಸೇ.ನಿರ್ದೇಶನಾಲಯ, ಬೆಂಗಳೂರು

3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು
4. ಡೀನ್ ಮತ್ತು ನಿರ್ದೇಶಕರು, ____________ ವಿಜ್ಞಾನ ಸಂಸ್ಥೆ,____________ಜಿಲ್ಲೆ.
5. ಎಲ್ಲಾ ಜಿಲ್ಲಾ ವಿಭಾಗೀಯ ಸಹ ನಿರ್ದೇಶಕರು, ____________ ವಿಭಾಗ,
6. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳು, ____________ ಜಿಲ್ಲೆ
7. ಎಲ್ಲಾ ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ____________ ಜಿಲ್ಲೆ
8. ಹಿರಿಯ ಪ್ರೋಗ್ರಾಮರ್, ಗಣಕಯಂತ್ರ ವಿಭಾಗ, ಆರೋಗ್ಯ ಮತ್ತು ಕು.ಕ.ಸೇ.ನಿ. ಬೆಂಗಳೂರು- ಸದರಿ ಸುತ್ತೋಲೆಯನ್ನು ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಿದೆ.
9. ಕಚೇರಿ ಅಧೀಕ್ಷಕರು (ಟಪಾಲು) ವಿಭಾಗ, ಆರೋಗ್ಯ ಮತ್ತು ಕು.ಕ.ಸೇ.ನಿ, ಬೆಂಗಳೂರು- ಆರೋಗ್ಯ ಮೇಲ್ವಿಚಾರಕರು, (Health Supervisor) ವೃಂದದ ನೌಕರರು ಪದೋನ್ನತಿಗಾಗಿ ಸಲ್ಲಿಸುವ ದಾಖಲಾತಿಗಳನ್ನು ಟಪಾಲು ವಿಭಾಗದಲ್ಲಿ ಸ್ವೀಕರಿಸಿದ ದಿನಾಂಕದಂದೆ ಎಲ್‌ಆರ್‌ಓ ವಿಭಾಗಕ್ಕೆ ಸಲ್ಲಿಸುವುದು. ನಿಗದಿತ ಅವದಿ ನಂತರ ನೀಡಿದಲ್ಲಿ ನಿಮ್ಮನೇ ನೇರ ಹೊಣೆಗಾರರನ್ನಾಗಿಸಲಾಗುವುದು.
10. ಕಚೇರಿ ಪ್ರತಿ.